## ಪಶ್ಚಿಮಘಟ್ಟದ ಕೆರೆಗಳು- ಜಲಮೂಲಗಳು : ಸಂರಕ್ಷಣೆ - ನಿರ್ವಹಣೆ ಕುರಿತು "ಕೆರೆ ಸಮ್ಮೇಳನ- 2014" ಸಮ್ಮೇಳನದ ನಿರ್ಣಯಗಳು :

1. ಪಶ್ಚಿಮಘಟ್ಟದ ಜಲಮೂಲಗಳು ಕೆರೆಗಳ ಸಂರಕ್ಷಣೆಗೆ ರಾಜ್ಯ ಸರ್ಕಾರ ವಿಶೇಷ ಯೋಜನೆ ರೂಪಿಸಬೇಕು ಎಂದು ಕೆರೆ ಸಮ್ಮೇಳನ- 2014 ಸರ್ಕಾರವನ್ನು ಒತ್ತಾಯ ಮಾಡಿದೆ.
2. ಶಾಲಾ ಹೈಸ್ಕೂಲು, ಕಾಲೇಜುಗಳ ಪಠ್ಯೇತರ ಚಟುವಟಿಕೆಗಳ ಭಾಗವಾಗಿ ವಿದ್ಯಾರ್ಥಿಗಳಿಗೆ ಕೆರೆಗಳ ಸಮೀಕ್ಷೆ ಅಧ್ಯಯನ ನಡೆಸಲು ವಿಶೇಷ ಕಾರ್ಯಕ್ರಮವನ್ನು ಶಿಕ್ಷಣ ಇಲಾಖೆ ರೂಪಿಸಬೇಕು.
3. ಪಶ್ಚಿಮಘಟ್ಟಗಳ ಕೆರೆಗಳ ಜಲಾನಯನ ಪ್ರದೇಶದಲ್ಲಿ ಇರುವ ಅರಣ್ಯಗಳ ರಕ್ಷಣೆಗೆ ಹಾಗೂ ವನೀಕರಣಕ್ಕೆ ವಿಶೇಷ ಯೋಜನೆಯನ್ನು ಅರಣ್ಯ ಇಲಾಖೆ ರೂಪಿಸಬೇಕು.
4. ಸ್ವಚ್ಛತಾ ಅಭಿಯಾನದ ವ್ಯಾಪ್ತಿಯಲ್ಲಿ ಕೆರೆ ಸ್ವಚ್ಛತೆಗೆ ವಿಶೇಷ ಆದ್ಯತೆ ನೀಡುವಂತೆ ಆಗಬೇಕು.
5. ಕೆರೆಗಳ ಅತಿಕ್ರಮಣ ತಡೆಗೆ ಕಠಿಣ ಕ್ರಮ ಅತ್ಯವಶ್ಯ. ಸ್ಥಾಪಿತ ಹಿತಾಸ್ತಿಗಳಿಂದ ಆಗಿರುವ ಕೆರೆ ಅತಿಕ್ರಮಣ ತೆರವುಗೊಳಿಸಲು ಕಟ್ಟುನಿಟ್ಟಿನ ಕ್ರಮ ಆಗಬೇಕು.
6. ಮಲೆನಾಡಿನ ಕೆರೆಗಳಲ್ಲಿ ಬಹಳಷ್ಟು ಹೂಳು ತುಂಬಿದೆ. ಕೆರೆ ಹೂಳು ತೆಗೆಯಲು ಸ್ಥಾನೀಯ ಪ್ರಯತ್ನಗಳು ಹೆಚ್ಚಾಗಬೇಕು.
7. ದೇವಸ್ಥಾನ ಪುಷ್ಕರಣಿ ಪುಣ್ಯ ತೀರ್ಥಗಳ ಉತ್ತಮ ನಿರ್ವಹಣೆಗೆ ದೇವಾಲಯ ಆಡಳಿತ ಮಂಡಳಿಗಳು ಮುಂದಾಗಬೇಕು.
8. ಕಪ್ಪತಗುಡ್ಡ ಹೊಗ್ರೆಕಾನಗಿರಿ, ಕೊಡಚಾದ್ರಿಗಳಂಥ ಅಕ್ಷಯ ಜಲಪಾತ್ರೆಗಳನ್ನು ಬರಿದು ಮಾಡುವ ಬೃಹತ್ ಗಣಿಗಾರಿಕೆಗೆ ನಿಷೇಧ ಹಾಕಬೇಕು.
9. ರಾಜ್ಯದಲ್ಲಿರುವ ಗ್ರಾಮ ಮಟ್ಟದ ಕೆರೆ ಅಭಿವೃದ್ಧಿ ಸಂಘಗಳನ್ನು ಸರ್ಕಾರ ಸಕ್ರಿಯಗೊಳಿಸಬೇಕು. ಬಲಗೊಳಿಸಬೇಕು. ಗ್ರಾಮ ಅರಣ್ಯ ಸಮಿತಿಗಳ ಮೂಲಕ ಕೆರೆಗಳ ಸಂರಕ್ಷಣೆಗೆ ಹಾಗೂ ಅಭಿವೃದ್ಧಿಗೆ ಅರಣ್ಯ ಇಲಾಖೆ ಯೋಜನೆ ರೂಪಿಸಬೇಕು.
10. ದೇವರಕಾಡು, ರಾಮಪತ್ರೆಜಡ್ಡಿಗಳಂಥ ಜೌಗು ಭೂಮಿಗಳನ್ನು ಸೂಕ್ಷ್ಮ ಪ್ರದೇಶ ಎಂದು ಗುರುತಿಸಿ ರಕ್ಷಿಸಬೇಕು.
11. ಮಲೆನಾಡಿನ ಕೆರೆಗಳ ವ್ಯಾಪ್ತಿ 5 ಎಕರೆಗಿಂತ ಕಡಿಮೆ ಇರುತ್ತದೆ. ಕಿರು ನೀರಾವರಿ ಇಲಾಖೆಯ ನಿಯಮಗಳ ಪ್ರಕಾರ ಕೆರೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಲೆನಾಡಿನಲ್ಲಿ ಕೈಗೊಳ್ಳಲು ಸಾಧ್ಯವಾಗುವುದಿಲ್ಲ.
12. ಕೆರೆ ವ್ಯಾಪ್ತಿ ಮಿತಿಯನ್ನು ಸಡಿಲಗೊಳಿಸಿ ಮಲೆನಾಡಿನ ಅತಿಚಿಕ್ಕ ಕೆರೆಗಳನ್ನು ಸಂರಕ್ಷಣೆ ಮಾಡಲು ಕ್ರಮ ಜರುಗಿಸಬೇಕು.
13. ಕೆರೆ ಪ್ರಾಧಿಕಾರ, ಜಲಾನಯನ ಇಲಾಖೆ, ಜಿಲ್ಲಾ ಪಂಚಾಯತ, ಜಲಸಂವರ್ಧನಾ ಸಂಸ್ಥೆ ಮುಂತಾದ ಸರ್ಕಾರದ ಇಲಾಖೆಗಳಲ್ಲಿ ಕೆರೆ ಅಭಿವೃದ್ಧಿ ಬಗ್ಗೆ ಸಮನ್ವಯ ತರಬೇಕು. ಇದಕ್ಕೆ ಏಕಗವಾಕ್ಷಿ ಯೋಜನೆ ಅತ್ಯವಶ್ಯ.
14. ಪಟ್ಟಣಗಳ ತ್ಯಾಜ್ಯಗಳನ್ನು ಕೆರೆಗಳಿಗೆ ತುಂಬಿ ಕೆರೆ ನಾಶ ಮಾಡುವ ಕುಪ್ರವೃತ್ತಿ, ಕಾಯಿದೆಬಾಹಿರ ಚಟುವಟಿಕೆಗಳು ಎಲ್ಲೆಡೆ ವ್ಯಾಪಕವಾಗಿವೆ. ಇವುಗಳ ತಡೆಗೆ ಕಠಿಣ ಕ್ರಮ ಕೈಗೊಳ್ಳಬೇಕು.
15. ಪಶ್ಚಿಮಘಟ್ಟದ ಹೊಳೆ, ಹಳ್ಳಗಳು ದಕ್ಷಿಣ ಭಾರತಕ್ಕೇ ನೀರಿನ ಮೂಲ. ಈಗಾಗಲೇ ಜಾರಿ ಆಗಿರುವ ಬೃಹತ್ ನೀರಾವರಿ ಯೋಜನೆಗಳು ಹಾಗೂ ಬೃಹತ್ ಜಲವಿದ್ಯುತ್ ಯೋಜನೆಗಳು ಪಶ್ಚಿಮಘಟ್ಟದ ನದಿಗಳ ನೀರಿನ ಲಭ್ಯತೆಯನ್ನು ಅವಲಂಬಿಸಿವೆ. ಈ ನೀರಾವರಿ ಯೋಜನೆಗಳ ದಕ್ಷತೆ ನಿರ್ವಹಣೆ ವ್ಯವಸ್ಥಿತಗೊಳಿಸಬೇಕು. ಪಶ್ಚಿಮಘಟ್ಟದ ನದಿಗಳನ್ನು ತಿರುಗಿಸುವ ಇನ್ನಷ್ಟು ಯೋಜನೆಗಳು ಅಸಾಧು, ಅವೈಜ್ಞಾನಿಕ. ಈ ಹೊಸ ಯೋಜನೆಗಳನ್ನು ಪುನರ್ವಿಮರ್ಶೆ ಮಾಡಬೇಕು.

## ಶ್ರೀ ಶ್ರೀಗಳವರು ಸಾನ್ನಿಧ್ಯವಿತ್ತ ಕೆಲವು ಮುಖ್ಯ ಕಾರ್ಯಕ್ರಮಗಳು

ಅಕ್ಟೋಬರ್ 24 ರಂದು ಶ್ರೀಮಠದಲ್ಲಿ ಗೋಪೂಜೆ ನಡೆಯಿತು. ಶ್ರೀ ಶ್ರೀಗಳವರು ಗೋಪೂಜೆಗೆ ಸಾನ್ನಿಧ್ಯವಿತ್ತು ಗೋವುಗಳಿಗೆ ಗೋಗ್ರಾಸ ನೀಡಿದರು. ನಂತರ ದನಬೈಲು ಕಟ್ಟೆಗೆ ಗೋಗಳೊಂದಿಗೆ ಊರವರೆಲ್ಲ ಸೇರಿ ಹೋಗಿ ಪಂಚಾಗ ಶ್ರವಣ ಕಾರ್ಯಕ್ರಮ ಜರುಗಿತು.